ಅದರ ಬಗ್ಗೆ ಚರ್ಚೆಯಾಗಿದ್ದು ಆದರೆ ಯಾವುದೇ ನಿರ್ದಿಷ್ಟವಾದ ಅಭಿಪ್ರಾಯಕ್ಕೆ ಬರುವುದಕ್ಕಾಗಿರಲಿಲ್ಲ. ನಮ್ಮ ಹಿಂದಿನ ಸರಕಾರದಲ್ಲಿ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿಯೂ ಕೂಡ ಸಚಿವ ಸಂಪುಟದ ಉಪಸಮಿತಿಯನ್ನು ಮಾಡಿ ಆ ಉಪಸಮಿತಿಯ ವರದಿ ಬರಬೇಕಾಗಿತ್ತು. ಅಷ್ಟರಲ್ಲಿ ಸಚಿವ ಸಂಪುಟದ ಪುನರ್ ರಚನೆಯಾಗಿ ಹೊಸ ಮುಖ್ಯಮಂತ್ರಿಗಳು ಬಂದಿದ್ದಾರೆ. ತಮಗೂ ಗೊತ್ತಿದೆ. ಹೊಸ ಮುಖ್ಯಮಂತ್ರಿಗಳ ಜೊತೆ ನಾನು ಈ ವಿಚಾರವನ್ನು ದೀರ್ಘವಾಗಿ ಚರ್ಚೆ ಮಾಡಿದ್ದೇನೆ ಮತ್ತು ಸಧ್ಯದಲ್ಲೇ ನಾನು ಕ್ರಮವನ್ನು ತೆಗೆದುಕೊಳ್ಳುವವನಿದ್ದೇನೆ. ಶಾಸಕರುಗಳ ಸಭೆಯಲ್ಲಿಯೂ ಕೂಡ ಇದರ ಬಗ್ಗೆ ಅಭಿಪ್ರಾಯವನ್ನು, ಅದರಲ್ಲೂ ವಿಶೇಷವಾಗಿ ಕಲ್ಬುರ್ಗಿ ವಿಭಾಗ, ಹುಬ್ಬಳ್ಳಿ ವಿಭಾಗ ಏನು ಇದೆ ಅದು ಸಂಪೂರ್ಣವಾಗಿ ರಾಷ್ಟ್ರೀಕರಣವಾಗಿರತಕ್ಕಂತಹ ವಿಭಾಗಗಳಾಗಿವೆ. ಆ ಭಾಗದ ಶಾಸಕರುಗಳು ಮುಖಂಡರುಗಳ ಅಭಿಪ್ರಾಯವನ್ನು ಇದರ ಬಗ್ಗೆ ಪಡೆದಿದ್ದೇನೆ. ಆದಷ್ಟು ಸರ್ವ ಸಮ್ಮತವಾದ ಅಭಿಪ್ರಾಯಗಳು ಈ ವಿಚಾರದಲ್ಲಿರುವುದನ್ನು ನಾನು ಮನಗಂಡಿದ್ದೇನೆ. ನ್ಯಾಷನಲೈಸ್ಡ್ ಏರಿಯಾದಲ್ಲೂ ರೂಟಿನಲ್ಲೂ ಸಹ ಖಾಸಗಿಯವರು ಓಡಿಸುತ್ತಿರುವುದು ನಮಗೆ ಅಲ್ಲಿ ಇನ್‌ಫ್ರಾಸ್ಟ್ರಕ್ಚರ್ ಅನ್ನು ಡೆವಲಪ್ ಮಾಡಿ ಸಾಕಷ್ಟು ಬಸ್‌ಗಳನ್ನು ಹಾಕದೇ ಇರತಕ್ಕಂಥಾದ್ದು ಕ್ಲಾಂಡಸ್ಟೈನ್ ಆಪರೇಷನ್ಸ್‌ಗಳನ್ನು ನಾನು ಒಪ್ಪಿಕೊಳ್ಳುತ್ತೇನೆ. ಕೆಎಸ್‌ಆರ್‌ಟಿಸಿಯವರು ಸಾಕಷ್ಟು ಬಸ್‌ಗಳನ್ನು ಓಡಿಸಿ ಪ್ರಯಾಣಿಕರಿಗೆ ಅನುಕೂಲ ಕೊಡಲಿಕ್ಕೆ ಶಕ್ತಿಯಾಗುವವರೆಗೂ ಕೂಡ ಆ ಕ್ಲಾಂಡಸ್ಟೈನ್ ಆಪರೇಷನ್ಸ್ ಅನ್ನು ನಿಲ್ಲಿಸುವುದಕ್ಕೆ ಹೋದರೆ ಪ್ರಯಾಣಿಕರಿಗೆ ತೊಂದರೆಯಾಗುತ್ತದೆ. ಅದರಿಂದ ಬ್ಯಾಲೆನ್ಸ್ ಅನ್ನು ಸ್ಟ್ರೈಕ್ ಮಾಡಬೇಕು. ಅದನ್ನು ಮಾಡುತ್ತೇನೆ.

ವಿಷಯ:- ಬೆಂಗಳೂರು-ಮೈಸೂರು ತಡೆರಹಿತ ಸುವಿಹಾರಿ ವಾಹನಗಳ ದುರಸ್ತಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 86 (592)

ಶ್ರೀ ಇ.ಮಾರುತೀರಾವ್ ಪವಾರ್ (ನರಸಿಂಹರಾಜ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬೆಂಗಳೂರು-ಮೈಸೂರು ತಡೆರಹಿತ ಸುವಿಹಾರಿ ವಾಹನಗಳ ಆಸನಗಳು, ಕಿಟಕಿ-ಗಾಜು ಇವೆಲ್ಲಾ ವ್ಯವಸ್ಥೆಯು ಸುವಿಹಾರಿಯಲ್ಲಿ ಅವ್ಯವಸ್ಥೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಪಿ.ಜಿ.ಆರ್.ಸಿಂದ್ಯಾ (ಸಾರಿಗೆ ಸಚಿವರು):-

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಕೆಲವು ವಾಹನಗಳ ಗಾಜು, ಆಸನಗಳು ಅಲುಗಾಡುವಿಕೆಯು ಗಮನಕ್ಕೆ ಬಂದಿದೆ.

ಆ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು 3.5 ಲಕ್ಷ ಕಿ.ಮಿ. ಕ್ರಮಿಸಿದ ನಂತರ

ಸುವಿಹಾರಿ ವಾಹನಗಳನ್ನು ಬದಲಿಸುವ ಕಾರ್ಯಯೋಜನೆಯನ್ನು ನಿರೂಪಿಸಿದೆ. ಈ ಸುವಿಹಾರಿ ವಾಹನಗಳು 3.5 ಲಕ್ಷ ಕಿ.ಮೀ ಕ್ರಮಿಸುವವರೆಗೆ ಮುನ್ನೆಚ್ಚರಿಕಾ ಕ್ರಮವಾಗಿ ಕಾರ್ಯಾಚರಣೆಗೆ ತೊಂದರೆಯಾಗದಂತೆ ಸುಸ್ಥಿತಿಯಲ್ಲಿಡಲು ದುರಸ್ತಿ ಕಾರ್ಯಕ್ರಮಗಳನ್ನು ಅಳವಡಿಸಿಕೊಂಡಿದೆ. ನಿಗಮದ ಆರ್ಥಿಕ ಪರಿಸ್ಥಿತಿ ಉತ್ತಮತೆಯನ್ನು ಗಮನದಲ್ಲಿಟ್ಟುಕೊಂಡು 3.5 ಲಕ್ಷ ಕಿ.ಮೀ ಕ್ರಮಿಸಿದ ನಂತರ ಇವುಗಳ ಬದಲಾವಣೆಗೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಮಾರುತಿರಾವ್ ಪವಾರ್:- ಮಾನ್ಯ ಸಚಿವರು ಮೈಸೂರು ಬೆಂಗಳೂರಿಗೆ ಹೋಗತಕ್ಕಂತಹ ಸುವಿಹಾರಿ ಬಸ್‌ಗಳು ಬಹಳಷ್ಟು ಅವ್ಯವಸ್ಥೆಯಾಗಿದೆ ಎಂದು ತಿಳಿಸಿದ್ದಾರೆ. ಆ ಬಸ್‌ಗಳಲ್ಲಿ ಪ್ರಯಾಣ ಮಾಡಬೇಕೆಂದು ಹತ್ತಿ ಕುಳಿತರೆ ಆ ಬಸ್ ಪ್ರಾರಂಭವಾದ ತಕ್ಷಣ ಗಡಗಡ ಎಂದು ಬರತೆಕ್ಕಂತಹ ಶಬ್ದ ಇಡೀ ಬಸ್‌ನ ಕಂಪನ ಪ್ರಾರಂಭವಾದರೆ ಅಲ್ಲಿ ಕುಳಿತಿರುವ ಪ್ರಯಾಣಿಕರು ನಮ್ಮ ಸಾರಿಗೆ ಸಂಸ್ಥೆಯ ಬಸ್ ಈ ಮಟ್ಟದಲ್ಲಿದೆ ಸರಕಾರ ನಡೆಸಲಿಕ್ಕಾಗದಿದ್ದರೆ ಖಾಸಗಿ ಸಂಸ್ಥೆಯವರಿಗೆ ಕೊಟ್ಟು ಉತ್ತಮವಾದ ವ್ಯವಸ್ಥೆ ಮಾಡಬೇಕೆಂದು ಮಾತನಾಡುತ್ತಾರೆ. 3.5 ಲಕ್ಷ ಕಿಲೋ ಮೀಟ್ ಓಡಿಸಿ ನಂತರ ಆ ಬಸ್‌ಗಳನ್ನು ಬದಲಾವಣೆ ಮಾಡುವ ವ್ಯವಸ್ಥೆ ಇದೆ ಎಂದು ಹೇಳಿದ್ದಾರೆ. ಆ ಬಸ್‌ಗಳು 7-8 ಲಕ್ಷ ಕಿಲೋ ಮೀಟರ್ ಓಡಿದೆಯೇನೋ ಅನ್ನಿಸುತ್ತದೆ. ಹಿಂದೆ ಇದೇ ಸಾರಿಗೆ ಸಚಿವರು ಇದೇ ಸಚಿವಸ್ಥಾನದಲ್ಲಿದ್ದಾಗ ಇಲ್ಲಿ ಆದಂತಹ ನಷ್ಟವನ್ನು ತುಂಬಾ ಕಡಿಮೆ ಮಾಡುವ ವ್ಯವಸ್ಥೆಯನ್ನು ಮಾಡಿದ್ದರು. ಉತ್ತಮ ಆಡಳಿತ ನಡೆಸಿದ್ದಾರೆಂಬ ನಂಬಿಕೆ ವಿಶ್ವಾಸ ನಮ್ಮ ಜನರಲ್ಲಿ ಇದೆ. ಈ ಸಂದರ್ಭದಲ್ಲಿ ಅವರು ಮತ್ತೆ ಸಾರಿಗೆ ಸಚಿವರಾಗಿದ್ದಾರೆ. ಮತ್ತೆ ಈ ಸಂಸ್ಥೆಯಲ್ಲಿ ಆಡಳಿತ ಉತ್ತಮಗೊಂಡು ಇಲ್ಲಿರುವ ನಷ್ಟ ಕಡಿಮೆಯಾಗಿ ಬಸ್‌ಗಳ ವ್ಯವಸ್ಥೆ ಉತ್ತಮಗೊಳ್ಳುವ ನಂಬಿಕೆ ಇದೆ. ಆದ್ದರಿಂದ ಸನ್ಮಾನ್ಯ ಸಚಿವರು ಈ ದಿಸೆಯಲ್ಲಿ ಕಾರ್ಯಕ್ರಮ ಕೈಗೊಳ್ಳುತ್ತಾರೆಯೇ?

+ ಶ್ರೀ ಪಿ.ಜಿ.ಆರ್.ಸಿಂಧ್ಯ:- ಲಕ್ಸುರಿ ಬಸ್‌ಗಳನ್ನು 3.5 ಲಕ್ಷ ಓಡಿದ ಮೇಲೆ ರೀಪ್ಲೇಸ್ ಮಾಡಬೇಕು. ರೀಪ್ಲೇಸ್ ಮಾಡುವುದಕ್ಕೆ ಹಣ ಇಲ್ಲ. 22 ಪರ್ಸೆಂಟ್ ನಾವು ಬಡ್ಡಿ ಕೊಟ್ಟು ಸಾಲ ತಂದು ಮಾಡುವ ಪರಿಸ್ಥಿತಿಗೆ ಸಾರಿಗೆ ಸಂಸ್ಥೆ ತಲುಪಿದೆ. ಅದರಿಂದಾಗಿ ಈ ಬಸ್‌ಗಳನ್ನು ರೀಪ್ಲೇಸ್ ಮಾಡುವುದಕ್ಕಾಗಿಲ್ಲ. ಶಬ್ದ ಬರತಕ್ಕಂಥಾದ್ದು ಕೆಟ್ಟು ಹೋಗತಕ್ಕಂಥಾದ್ದು ನಿಜ. ಅದಕ್ಕೋಸ್ಕರವೇ ನಾನು ಆಗಸ್ಟ್‌ನಿಂದ ನವೆಂಬರ್‌ವರೆಗೆ ನೂರು ದಿನಗಳ ಕಾರ್ಯಕ್ರಮವೆಂದು ಹಾಕಿಕೊಂಡು ಸ್ವಚ್ಛವಾಗಿ ಬಸ್‌ಗಳನ್ನು ಇಡುವುದು ಸಮಯಕ್ಕೆ ಸರಿಯಾಗಿ ಬಸ್ ಓಡುವುದು ಇಂತಹ ಕೆಲವು ವಿಚಾರಗಳಲ್ಲಿ ಕ್ರಮ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದೇನೆ. ಆದಷ್ಟು ಬೇಗ ಎಲ್ಲಾ ಕಡೆಯಲ್ಲಿಯೂ ಬಸ್‌ಗಳ ಕಡೆಗೆ ಗಮನ ಹರಿಸುತ್ತೇನೆ. ಬೆಂಗಳೂರು ಮೈಸೂರು ಅಷ್ಟೇ ಅಲ್ಲ. ನಿನ್ನೆ ರಾತ್ರಿ ನಮ್ಮ ಗೌರವಾನ್ವಿತ ಬೆಳಗಾವಿಯ ಶಾಸಕರೆಲ್ಲಾ ಹೇಳಿದರು. ನಮಗೆ ಲಕ್ಸುರಿ ಬಸ್ ಹಾಕಿ 8 ವರ್ಷವಾಯಿತು. ನಮಗೆ ರೀಪ್ಲೇಸ್ ಮಾಡಬೇಕೆಂದು ತಿಳಿಸಿದರು. ಇನ್ನು 8 ದಿವಸದಲ್ಲಿ ಹೊಸ ಬಸ್‌ಗಳನ್ನು ರೀಪ್ಲೇಸ್ ಮಾಡುವುದಕ್ಕೆ ಸೂಚನೆ ಕೊಟ್ಟಿದ್ದೇನೆ.

ಶಾಸಕರ ಸೂಚನೆ ಪರಿಗಣಿಸಬೇಕೆಂದು ಹೇಳಿದಿರಿ. ಆ ದೃಷ್ಟಿಯಿಂದ ಹೇಳುತ್ತಿದ್ದೇನೆ. ಅದೇ ರೀತಿಯಲ್ಲಿ ಬೆಂಗಳೂರು-ಮೈಸೂರು ತಡೆರಹಿತ ಸುವಿಹಾರಿ ಬಸ್‌ಗಳ ಬಗ್ಗೆ ಹೇಳಿದಿರಲ್ಲಾ ನಾನು ಅದನ್ನು ಮಾಡಿಸಿಕೊಡುತ್ತೇನೆ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ:- ನಮ್ಮ ಕರ್ನಾಟಕ ಕೆ.ಎಸ್.ಆರ್.ಟಿ.ಸಿ ಬಸ್ ಹೇಗೆ ಇದೆ ಎಂದರೆ ನಮ್ಮ ಊರಿನಲ್ಲಿ ಒಬ್ಬರು ಕ್ರಷರ್ ಓಪನ್ ಮಾಡಿದರು ಹಲ್ಲಿಲ್ಲದ ಗಾಣ, ತೂತು ಕೊಪ್ಪರಿಗೆ, ಕೊಂಬು ಇಲ್ಲದ ಎತ್ತು, ಗಡಾಣಿ ಇಲ್ಲದ ಗಾಡಿ ಆ ರೀತಿ ಈ ಬಸ್‌ಗಳು ಇವೆ. ಯಾವ ದಿಕ್ಕಿಗೆ ಹೋಗುತ್ತವೆ ಎಲ್ಲಿಗೆ ಹೋಗುತ್ತವೆಂದು ಗೊತ್ತಾಗುವುದಿಲ್ಲ. ಹರಿದು ಹೋಗಿರುವ ಸೀಟುಗಳು ಅಲ್ಲಿರುವ ತಿಗಣೆಗಳು, ಗಾಜುಗಳು ಗಡಗಡ ಎನ್ನುವುದು ಹೃದಯವನ್ನೇ ನಡುಗಿಸುತ್ತವೆ. ಕೆ.ಎಸ್.ಆರ್.ಟಿ.ಸಿ.ಯ ಬಸ್‌ನ ಪ್ರಯಾಣವನ್ನು ಹೇಳುತ್ತಾ ಹೋದರೆ ಪುಟಗಟ್ಟಲೆ ಹೇಳಬಹುದು. ಆದರೆ ಸಾರಿಗೆ ಸಚಿವರು ಇದನ್ನು ಸರಿಪಡಿಸುತ್ತಾರೆಂಬ ಭರವಸೆ ಇದೆ. ಅಲ್ಲಿ ಮುಂದುಗಡೆ ಲಗೇಜ್ ಹಾಕಿಕೊಳ್ಳುತ್ತಾರೆ.

ಅಧ್ಯಕ್ಷರು:- ಬಸ್‌ನಲ್ಲಿ ತಿಗಣೆ ಇಲ್ಲದೆ ಆನೆ ತಂದು ಹಾಕುವುದಕ್ಕಾಗುತ್ತದೆಯೇ?

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ:- ಡ್ರೈವರ್ ಸೀಟುಗಳ ಪಕ್ಕದಲ್ಲಿ ಲಗೇಜ್ ತುಂಬಿಕೊಂಡು.....

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಬೈರೇಗೌಡರು ಬಸ್‌ನಲ್ಲಿ ಏಕೆ ಕೂಡುತ್ತೀರಿ ನನ್ನ ಬಂಡಿಯಲ್ಲಿ ಕುಳಿತುಕೊಳ್ಳಿ ಎಂದು ಹೇಳುತ್ತಿದ್ದಾರೆ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ:- ಕೆ.ಎಸ್.ಆರ್.ಟಿ.ಸಿ.ಯ ಕರ್ಮಕಾಂಡವನ್ನು ತೊಳೆಯಬೇಕಾದರೆ ಮಾನ್ಯ ಸಿಂಧ್ಯರವರು ಸಿದ್ಧಿ ಪಡೆಯಬೇಕಾಗುತ್ತದೆ. ಭಾರಿ ಕಷ್ಟ ಇದೆ. ಆ ಕೆ.ಎಸ್.ಆರ್.ಟಿ.ಸಿಯಲ್ಲಿನ ಒಬ್ಬರು ಯೂನಿಯನ್ ಅನ್ನು ಮಾತನಾಡಿಸಿದರೆ ಇನ್ನೊಬ್ಬರಿಗೆ ಕಷ್ಟ. ದಯಮಾಡಿ ಸುವಿಹಾರಿ ಬಸ್‌ಗಳು ಸುಖವಾಗಿ ಬೆಂಗಳೂರು ಮೈಸೂರು ತಲುಪುವ ಹಾಗೆ ಮಾಡಬೇಕು.

ಶ್ರೀ ಕುಂಬ್ಳೆ ಸುಂದರರಾವ್:- ಮಂಗಳೂರಿನಿಂದ ಬೆಂಗಳೂರಿಗೆ ಬರುವ ಬಸ್‌ಗಳ ವ್ಯವಸ್ಥೆ ಶೋಚನೀಯ. ಅದನ್ನು ರೀಪ್ಲೇಸ್ ಮಾಡುವ ಸ್ಥಿತಿಯಲ್ಲಿ ಇಲ್ಲವೆಂದು ಮಾನ್ಯ ಸಚಿವರು ಹೇಳಿದರು. ಕನಿಷ್ಟ ರಿಪೇರಿ ಮಾಡುವ ಸ್ಥಿತಿಯಲ್ಲಾದರೂ ನೀವು ಇದ್ದೀರೋ ಇಲ್ಲವೋ, ಶಬ್ದ ಕಡಿಮೆ ಮಾಡಿ ಸುಣ್ಣ ಬಣ್ಣ ಬಳಿಸಿ ನೋಡಲಿಕ್ಕಾದರೂ ಚೆನ್ನಾಗಿ ಕಾಣಲಿ. ಕುಳಿತುಕೊಳ್ಳುವ ಕಷ್ಟ ನಮ್ಮದು, ನೋಡುವ ಕಷ್ಟ ಉಳಿದವರದ್ದು. ಆ ರೀತಿ ಮಾಡಿ ಎಂದು ವಿನಂತಿಸುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಇದೇ ಕಾರಣದಿಂದ ಗೌರವಾನ್ವಿತ ಮುಖ್ಯಮಂತ್ರಿಗಳು ನನ್ನನ್ನು ಸಾರಿಗೆ ಮಂತ್ರಿಯನ್ನಾಗಿ ಮಾಡಿ ಅಧ್ಯಕ್ಷನನ್ನಾಗಿ ಮಾಡಿ ಇದನ್ನು ಮಾಡಲೇಬೇಕೆಂದು ಸೂಚನೆ ಕೊಟ್ಟಿದ್ದಾರೆ. ಆದಷ್ಟು ನಾನು ಪ್ರಯತ್ನ ಮಾಡುತ್ತೇನೆ.

ಡಾ.ಎಂ.ಪಿ.ಕರ್ಕಿ:- ಕೆ.ಎಸ್.ಆರ್.ಟಿ.ಸಿ.ಯವರು ಕುಮಟಾಕ್ಕೆ ಎರಡು ಹೊಸ ಬಸ್ ಹಾಕಿದ್ದಾರೆ. ಆದರೆ ಮಳೆಗಾಲದಲ್ಲಿ ನೀರು ಬಸ್ ಒಳಗೆ ಬರುತ್ತಿದೆ.

ಅಧ್ಯಕ್ಷರು:- ನಿಮ್ಮ ಪ್ರಶ್ನೆ ಏನೆಂಬುದು ಅರ್ಥವಾಗುವುದಿಲ್ಲ. ಅವರು ಬಸ್ ತಿಗಣೆ ಇರುತ್ತದೆಂದು ದೂರು ಕೊಡುತ್ತಾರೆ. ನೀವು ಮಳೆಗಾಲದಲ್ಲಿ ನೀರು ಬರುತ್ತದೆಂದು ಹೇಳುತ್ತಿದ್ದೀರಿ. ಮಳೆ ಇಲ್ಲದಿದ್ದರೆ ನೀರು ಹೇಗೆ ಬರತ್ತದೆ?

ಡಾ:ಎಂ.ಪಿ.ಕರ್ಕಿ:- ಹಳೆ ಬಸ್ ಆದರೆ ಪರವಾಗಿಲ್ಲ. ಅದು ಹೊಸ ಬಸ್. ಅದನ್ನು ಹಾಕಿ 15 ದಿವಸ ಆಯಿತು. ಆಗಲೇ ಸೋರುತ್ತಿದೆ.

ವಿಷಯ:- ಕುಂದಾಪುರ ಉಪವಿಭಾಗದ ಸಹಾಯಕ ನಿಬಂಧಕರ ಕಛೇರಿಗೆ ಬಂದಿರುವ ಮೇಲ್ಮನವಿಗಳ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 87 (301)

ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ (ಕುಂದಾಪುರ):- ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಕುಂದಾಪುರ ಉಪವಿಭಾಗದಲ್ಲಿ ಸಹಾಯಕ ನಿಬಂಧಕರ ಕಛೇರಿಯಲ್ಲಿ ಕಳೆದ 3 ವರ್ಷಗಳಿಂದ ಮೇಲ್ಮನವಿಗೆ ಬಂದ ಅರ್ಜಿಗಳೆಷ್ಟು?

2) ಅವುಗಳಲ್ಲಿ ಎಷ್ಟು ತೀರ್ಮಾನವಾಗಿರುತ್ತವೆ. ಹಾಗೂ ಎಷ್ಟು ಬಾಕಿ ಇರುತ್ತವೆ. ಬಾಕಿ ಇರುವ ಮೇಲ್ಮನವಿಗಳೆಷ್ಟು? ತೀರ್ಮಾನವಾಗದಿರಲು ಕಾರಣವೇನು?

ಶ್ರೀ ಎಸ್.ಎಸ್.ಪಾಟೀಲ್ (ಸಹಕಾರ ಸಚಿವರು):-

1) ಮೇಲ್ಮನವಿಗಳು ಯಾವುದು ಬಂದಿರುವುದಿಲ್ಲ. ಕಾರಣ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ರ ರೀತ್ಯಾ ಸಹಕಾರ ಸಂಘಗಳ ಸಹಾಯಕ ನಿಬಂಧಕರಿಗೆ ಮೇಲ್ಮನವಿಯನ್ನು ಸ್ವೀಕರಿಸಿ ಇತ್ಯರ್ಥ ಮಾಡುವ ಅಧಿಕಾರವು ದತ್ತವಾಗಿರುವುದಿಲ್ಲ. ಆದರೆ ಸಹಕಾರ ಸಂಘಗಳ ಕಾಯ್ದೆ ಪ್ರಕಾರ ಕಲಂ 70ರನ್ವಯ ವಿವಾದ ಪ್ರಕರಣಗಳನ್ನು, ಕಲಂ 69ರ ಅನ್ವಯ ಅಧಿಭಾರ ಪ್ರಕರಣಗಳನ್ನು ಮತ್ತು ಕಲಂ 126ಎ-29ಸಿ ಪ್ರಕಾರ ಅರ್ಜಿಗಳನ್ನು ಸ್ವೀಕರಿಸಿ ಇತ್ಯರ್ಥಪಡಿಸುವ ಅಧಿಕಾರವು ದತ್ತವಾಗಿರುತ್ತದೆ. ಅದರಂತೆ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಕುಂದಾಪುರ ಇವರು ಕಳೆದ 3 ವರ್ಷಗಳಲ್ಲಿ ಸ್ವೀಕರಿಸಿ ಇತ್ಯರ್ಥಪಡಿಸಿರುವ ಪ್ರಕರಣಗಳ ವಿವರ - ಈ ಕೆಳಕಂಡಂತಿವೆ.